# ಸಮಾಗಮ

■ ತೆಲುಗು ಮೂಲ: ಓಲ್ಗಾ
■ ಕನ್ನಡಕ್ಕೆ : ಅಜಯ್ ವರ್ಮಾ ಅಲ್ಲೂರಿ
ಚಿತ್ರ: ವೀರೇಶ್ ಡಿ. ಎಂ.



ಸೂರ್ಯ ಮುಳುಗುತ್ತಿದ್ದಾನೆ. ಕಾಡು ಒಂದೆಡೆ ಕೆಂಬಣ್ಣದ ಕಾಂತಿಯಿಂದ ಮತ್ತೊಂದೆಡೆ ಹಬ್ಬುತ್ತಿರುವ ಕತ್ತಲೊಡನೆ ಕಪ್ಪು ಹೊಗೆಯುಗುಳುತ್ತಿರುವ ಉರಿಗೆಂಪು ಕುಲುಮೆಯಂತಿದೆ. ಆಗಸದಲ್ಲಿ ಹಕ್ಕಿಗಳು ಗುಂಪುಗಟ್ಟಿ ಗೂಡು ಸೇರುತಲಿವೆ. ಅವುಗಳ ಕಲರವದಿಂದಾಗಿ ಕಾಡು ನಲಿದಾಡುತ್ತಿದೆ. ಚಿಗರೆಗಳ ಹಿಂಡು, ಹಗಲಿನ ಬೇಸರವನ್ನು ಬಿಡಿಸಿಕೊಂಡು ಬೆಳದಿಂಗಳ ವಿಹಾರಕ್ಕೆ ಅಣಿಯಾಗುತ್ತಿದೆ. ಅಂಥಾ ದಟ್ಟ ಕಾಡಿನಲ್ಲಿ ಪ್ರತಿಭಾವಂತ ಚಿತ್ರಕಾರನೊಬ್ಬನ ಕಲಾಸೃಷ್ಟಿಗೆ ಹಿಡಿದ ಕನ್ನಡಿಯಂತೆ ತುಂಬಾ ಪ್ರಶಾಂತವಾದ, ಸೊಗಸಾದ ಋಷಿಯಾಶ್ರಮವೊಂದು ಶೋಭಿಸುತ್ತಿದೆ.

ಆಶ್ರಮದಲ್ಲಿ ಸಂಜೆಹೊತ್ತಿನ ಕಾರ್ಯಕ್ರಮಗಳು ಶುರುವಾಗಿವೆ. ಅಗ್ನಿಹೋತ್ರಗಳು ಬೆಳಗುತ್ತಿವೆ. ಗಂಭೀರ ಮಂತ್ರನಾದ ಮಧುರವಾಗಿ ಕೇಳಿಬರುತ್ತಿವೆ. ಆಶ್ರಮದ ಮುನಿಕಾಂತೆಯರು ಹೂ–ಹಣ್ಣು ತರುಗಳಿಗೆ ನೀರುಣಿಸಿ ವಿರಮಿಸಿದ್ದಾರೆ. ಕೆಲ ಹೆಂಗಸರು ದೇವರ ಪೂಜೆಗೆಂದು ಮಾಲೆ ಕಟ್ಟುತ್ತಿದ್ದಾರೆ. ವನಸಂಚಾರದಿಂದ ಮರಳಿ ಬಂದ ಮಕ್ಕಳು ತಮಗಾಗಿಯೇ ಆತುರದಿಂದ ಕಾಯುತ್ತಿದ್ದ ತಾಯಂದಿರ ಅಪ್ಪುಗೆಯಲ್ಲಿ ಸೆರೆಯಾಗಿದ್ದಾರೆ. ಇನ್ನೂ ಕೆಲ ತಾಯಂದಿರು ಸಾಯಂಕಾಲದ ಕಾರ್ಯಕ್ರಮಗಳಿಗೆ ತಮ್ಮ ಮಕ್ಕಳನ್ನು ತ್ವರೆಗೊಳಿಸುತ್ತಿದ್ದಾರೆ. ಅಲ್ಲಿ ಚಿಕ್ಕ ಕುಟೀರದಲ್ಲಿ ತಾಯಿಯೊಬ್ಬಳು ವನಸಂಚಾರದಿಂದ ಇನ್ನೂ ಮರಳಿರದ ಮಕ್ಕಳಿಗಾಗಿ ಕಾದುನಿಂತಿದ್ದಾಳೆ. ಆ ಮಕ್ಕಳ ಮೇಲೆಯೇ ಜೀವವನ್ನೆಲ್ಲಾ ಹೊರೆಯಿಟ್ಟು ಬಾಳುತ್ತಿದ್ದಾಳೆಂಬುದು ಆಕೆಯ ಕಂಗಳನು ನೋಡಿದ ಯಾರಿಗಾದರೂ ಅರಿವಾಗುತ್ತದೆ. ಆತುರ, ಆರ್ತತೆ, ಅನುಕಂಪದಿಂದ ಕೂಡಿದ ಆ ಅಮಾಯಕ ಕಂಗಳ ತುಂಬಾ ಈಗ ಭಯದ ಅಲೆಗಳು ಮಿಸುಕಾಡುತ್ತಿವೆ.

ಆ ತಾಯಿಯ ಹೆಸರು ಸೀತೆ. ತನ್ನಿಬ್ಬರು ತನಯರಿಗಾಗಿ ಕಾದು ನೋಡುತ್ತಿದ್ದಾಳೆ.

ದಿನವೂ ಈ ವೇಳೆಗೆ ಇಬ್ಬರೂ ಕಾಡಿನಿಂದ ಮರಳುತ್ತಿದ್ದರು. ಅಲ್ಲಿಂದ ಬಗೆಬಗೆಯ ಕಾಡಹೂಗಳನ್ನು ತರುತ್ತಿದ್ದರು. ದೇವರ ಪೂಜೆಗೆ ಅವುಗಳನ್ನು ಬಳಸಬೇಕಾಗಿ ತಾಯಿಯ ಬಳಿ ಬೇಡಿಕೊಳ್ಳುತ್ತಿದ್ದರು. ಹೆಸರುಗೊತ್ತಿರದ ಹೂಗಳಿಂದ ತಾನು ಪೂಜೆ ಮಾಡುವುದಿಲ್ಲವೆನ್ನುತ್ತಿದ್ದಳು ಸೀತೆ. ಆಗ ಇಬ್ಬರೂ ಸೇರಿ ಆ ಹೂಗಳಿಗೆ ಚಿತ್ರ ವಿಚಿತ್ರ ಹೆಸರು ಕೊಡುತ್ತಿದ್ದರು. ಸೀತೆ ನಕ್ಕರೆ, ಅವರಿಗೆ ಮುನಿಸು. ಆಗ ಆಕೆ ಇಬ್ಬರನ್ನೂ ರಮಿಸಿ ಆ ಹೂಗಳಿಂದ ಪೂಜೆ ಮಾಡಿ ಸಂತೈಸುತ್ತಿದ್ದಳು. ಕತ್ತಲು ದಟ್ಟವಾಗುವ ವೇಳೆಗೆ ಬಾಲಕರಿಬ್ಬರೂ ಕೊರಳೆತ್ತಿ ಹಾಡತೊಡಗಿದರೆ, ಇಡೀ ಕಾಡಿಗೇ ಕಿವಿ ಮೂಡುತ್ತಿತ್ತು.

ಲವಕುಶರು ಏಕೋ ಇನ್ನೂ ಮರಳಲಿಲ್ಲ. ಸೀತೆಯ ಕಣ್ಣಲ್ಲಿ ಭಯವು ತುಂಬಿಕೊಂಡಿದೆಯಾದರೂ ಆಕೆಯ ಮನವು ಯಾವುದೇ ಆಪತ್ತನ್ನು ಶಂಕಿಸುತ್ತಿಲ್ಲ. 'ಮೀನಿಗೆ ಈಜಲು ಕಲಿಸಬೇಕೆ?' ಅವರಿಬ್ಬರಿಗೆ ಕಾಡು ಹೊಸತೇನೂ ಅಲ್ಲ. ಅಲ್ಲಿಯೇ ಹುಟ್ಟಿದ್ದಾರೆ. ಅಲ್ಲಿಯೇ